ಇವರನ್ನು ಸಹೋದರರು ಎನ್ನಲಾದೀತೇ? ನಂಬುವುದುಂಟೇ? ಹೊಂಗ್ಸು ಪ್ರಾಂತ್ಯಕ್ಕೆ ಬರುತ್ತಿದ್ದಂತೆ, "ನಮ್ಮ ಹೊಂಗ್ಸು ನಿಮ್ಮ ಬೆಂಗಳೂರು ಇದ್ದಂತೆ, ಎಜುಕೇಟಡ್ ಮಾಡರ್ನ್ ಸಿಟಿ" ಎಂದಾಗ ಹೆಮ್ಮೆ ಎನಿಸಿತು. ಹೊಂಗ್ಸು ಬಹಳ ಚಂದದ ನಗರ. ಎಲ್ಲೆಲ್ಲೂ ಕೊಳಗಳು, ಆಧುನಿಕ ಮನೆಗಳು, ಚಂದದ ರಸ್ತೆಗಳು. ನಮ್ಮ ಬೆಂಗಳೂರು ಹೀಗೆ ಒಂದು ಕಾಲದಲ್ಲಿ ಇತ್ತೋ ಏನೋ... ಎಲ್ಲ ಇದ್ದರೂ ಚೀನಿಯರ ಮುಖದಲ್ಲಿರುವ ಒಂದು ತರಹದ ನಿರ್ಲಿಪ್ತ ಭಾವ ಅರ್ಥವಾಗದಂತಿತ್ತು. ನಮಗೋ ಖುಷಿಯಾದರೆ ಕುಣಿದು ಕುಪ್ಪಳಿಸಬೇಕು, ಅಳುವುದೆಂದರೆ ಜೋರಾಗಿ ಎಲ್ಲರಿಗೂ ಕಾಣಿಸುವಂತೆ ಅಳಬೇಕು, ಜಗಳ ಆಡಬೇಕೆಂದರೆ ಜಗಳವಾಡಬೇಕು. ಏನನ್ನೂ ಓದಲಾಗದ ಮುಖ ಭಾವ.

ಬಸ್ಸು 15ನೇ ಶತಮಾನದಲ್ಲಿ ಕಟ್ಟಿದ್ದೆನ್ನಲಾದ ಪಗೋಡದ ಮುಂದೆ ನಿಂತಿತು. ಭವ್ಯ ಸ್ಮಾರಕ, ಸುತ್ತ ಹೂವು ಗಿಡಗಳಿರುವ ಸುಂದರ ಪಾರ್ಕು, ಬಣ್ಣಬಣ್ಣದ ಮೀನುಗಳಿರುವ ಕೊಳ ಬೇರೆ ಇದೆ. ಪಗೋಡ 8–10 ಅಂತಸ್ತುಗಳಿದ್ದರೂ ನೋಡಲು ಬಿಟ್ಟಿದ್ದು ಕೆಳ ಅಂತಸ್ತು ಮಾತ್ರ. ಎಲ್ಲೆಲ್ಲೂ ಹೀಗೆಯೇ, ಹೇಳಿದಂತೆ ಮಾಡಿ, ತೋರಿಸಿದಂತೆ ಮಾಡಿ ಮುಚ್ಚಿಡುವುದೇ. ಹೇಳದಿರುವುದೇ ಹೆಚ್ಚು. ವಾಪಸು ಬಂದುಬಿಟ್ವೆ. ಎಲ್ಲರೂ ಹಿಂತಿರುಗಿ ಬರಲು ಇನ್ನೂ ಇಪ್ಪತ್ತು ನಿಮಿಷವಾದರೂ ಬೇಕಿತ್ತು. ಮರದ ಕೆಳಗೆ ಶೆರ್ಲಿ ವಾಟ್ಸ್‌ಆ್ಯಪ್‌ನಲ್ಲಿ ಬ್ಯೂಸಿಯಾಗಿದ್ದಂತೆ ಕಾಣಿಸಿತು. ಎಷ್ಟು ಚೆನ್ನಾಗಿದ್ದಾಳೆ, ಮೂವತ್ತು ವರ್ಷವಂತೆ. ಇಪ್ಪತ್ತರವಳಂತೆ ಕಾಣುತ್ತಾಳೆ. ಮುಖದಲ್ಲಿ ನೆರಿಗೆಯಾಗಲಿ, ಕಲೆಯಾಗಲಿ ಇಲ್ಲ. ಹಾಲು ಬಿಳಿ ಬಣ್ಣ, ತುಟಿಗೆ ತೆಳುವಾಗಿ ಹಚ್ಚಿದ ಬಣ್ಣ ಒಪ್ಪುತ್ತಿತ್ತು. ನೋಡುತ್ತಿದ್ದಂತೆ ಪಟ ಪಟನೆ ಉದುರಿದ ಅವಳ ಕಣ್ಣೀರು ಮೊಬೈಲನ್ನು ಒದ್ದೆ ಮಾಡಿತು. ಅವಳನ್ನು ಮಾತಾಡಿಸುವ ಮನಸ್ಸಾಯಿತು. "ಏನಾಯಿತೇ? ಏಕೆ ಅಳುತ್ತಿರುವೆ?" ಕೇಳಿದೆ. ಮಾತಾಡಲಿಲ್ಲ ಅವಳು. ಅನುಮಾನವಾಯಿತು. "ಶೆರ್ಲಿ ಬಾಯ್ ಫ್ರೆಂಡ್ ಏನೆಂದ?" ಕಣ್ಣು, ಮೂಗು ಒರೆಸುತ್ತಾ, "ಮೆಸೇಜ್ ಕಳುಹಿಸಿದ್ದಾನೆ, ನನ್ನ, ನಿನ್ನ ಸಂಬಂಧ ಮುಗಿಯಿತು ಎಂದು ಸಿಂಪಲ್ ಆಗಿ ಬರೆದಿದ್ದಾನೆ. ಅವನೀಗ ಬೇರೊಬ್ಬಳನ್ನು ಹಿಡಿದಿದ್ದಾನೆ, ದೊಡ್ಡ ಕೆಲಸದಲ್ಲಿರುವವಳಿರಬೇಕು." "ಬೇಡ ಬಿಡು, ಮತ್ತೊಬ್ಬನನ್ನು ಹುಡುಕಿಕೊಂಡರಾಯಿತು. ನಿನ್ನನ್ನು ಯಾರೂ ಬೇಡ ಅನ್ನೋರು" ಎಂದೆ. ಮತ್ತೆ ದಳದಳನೆ ಕಣ್ಣೀರು ಹರಿಸಿದಳು. ಗಾಬರಿಯಾಯಿತು. "ಸಿಸ್ಟರ್, ಈ ಐದು ವರ್ಷಗಳಲ್ಲಿ ಮೂರನೆಯ ಬಾಯ್ ಫ್ರೆಂಡ್ ಇವನು. ಒಂದು ಸಲ ಅಬಾರ್ಷನ್ ಬೇರೆ ಮಾಡಿಸಿಕೊಂಡಿದ್ದೇನೆ. ಬಾಯ್ ಫ್ರೆಂಡ್ಸ್‌ಗಳು ಮೊದಲು ಒಳ್ಳೆಯವರಾಗಿಯೇ ಇರುತ್ತಾರೆ. ಬೇರೊಬ್ಬ ಒಳ್ಳೆಯ ಹುದ್ದೆಯಲ್ಲಿರುವವಳು ಸಿಕ್ಕಿದ ಕೂಡಲೆ ಹೊರಟು ಹೋಗುತ್ತಾರೆ. ಟೂರಿಸ್ಟ್ ಗೈಡ್ ಕೆಲಸ ವರ್ಷವಿಡೀ ಇರುವುದಿಲ್ಲ. ಸಂಜೆ ಕೆಲಸ ಮಾಡುವ ಸೂಪರ್ ಮಾರ್ಕೆಟ್ಟಿನಲ್ಲಿ ಕೊಡುವ ಸಂಬಳವೂ ಅಷ್ಟಕಷ್ಟೇ. ಪ್ರೀತಿ, ಪ್ರೇಮ ಎಲ್ಲಾ ಸುಳ್ಳು, ದುಡ್ಡಷ್ಟೇ ಮುಖ್ಯ. ನನ್ನ ವಯಸ್ಸಿನ ಹುಡುಗ ಹುಡುಗಿಯರಲ್ಲಿ ಹೆಚ್ಚಿನವರು ಆಗಲೇ ಮದುವೆಯಾಗಿದ್ದಾರೆ. ಎಲ್ಲವೂ ಇದೆಯೆಂದು ತೋರುವ ಚೀನಾದಲ್ಲಿ ಜನರು ಖುಷಿಯಾಗಿದ್ದಾರೆ ಎಂದು ಕೊಂಡೆಯಾ? ಬಿಡು, ಹೆಚ್ಚು ಹೇಳಲು ಆಗೋಲ್ಲ, ಸರಕಾರದ ಅನುಮತಿ ಇಲ್ಲ."

ದಿನವಿಡಿ ನಿರಾಸಕ್ತಿಯಿಂದ ತನ್ನ ಕೆಲಸವನ್ನು ಮಾಡುತ್ತಿದ್ದಳು. ಅವಳನ್ನು ಹೆಚ್ಚು ಮಾತಾಡಿಸಲು ಹೋಗಲಿಲ್ಲ. ಬಸ್ಸಿನಲ್ಲಿದ್ದ ಉಳಿದ ಟೂರಿಸ್ಟುಗಳು ಅವಳನ್ನು ಆಗಾಗ ಛೇಡಿಸುತ್ತಿದ್ದರು. ಅವಳೋ ನಿರಾಸಕ್ತಿಯಿಂದ ನಗುತ್ತಿದ್ದಳು. ಬಸ್ಸಿನಲ್ಲಿ ಅಂತ್ಯಾಕ್ಷರಿ ಶುರುವಾಯಿತು. ಮುಂದಿನ ಸೀಟಿನಲ್ಲಿ ಕೂತ ಪಾಟೀಲ್ ದಂಪತಿಯ ಜಗಳ ಅಂತ್ಯಾಕ್ಷರಿಯನ್ನು ಮೀರಿ ಕೇಳಿಸುತ್ತಿತ್ತು. ಆಶಾ ಊರಿನಿಂದ ತಂದಿದ್ದ ಕೋಡುಬಳೆ, ರವೆ ಉಂಡೆ ಹಂಚುತ್ತಿದ್ದರು.

ಮರುದಿನ ಶಾಂಗೈಗೆ ವಿಮಾನದಲ್ಲಿ ನಮ್ಮ ಪ್ರಯಾಣ.

★★★